# ಮಹಿಳೆಯರಿಗೆ ಎಲ್ಲಿದೆ ಸ್ವಾತಂತ್ರ್ಯ?

**ಬಿ.ಜಯಶ್ರೀ**

**ರಂಗಭೂಮಿ ಕಲಾವಿದೆ**

> ‘ನಾನು..., ನನ್ನದು..’ ಎಂಬ ಪ್ರವೃತ್ತಿ ಹೆಚ್ಚಾದಾಗ ಸ್ವಾತಂತ್ರ್ಯ ಎನ್ನುವುದು ಸ್ವೇಚ್ಛೆಯಾಗುತ್ತೆ.

ನಮ್ಮ ಮನೆತನವೇ ಕಲೆಗೆ ಹೆಸರಾದದ್ದು. ಮನೆಯಲ್ಲಿ ರಂಗಭೂಮಿ ಬಗ್ಗೆ ಬಹಳ ಚಟುವಟಿಕೆಗಳು ನಡೆಯುತ್ತಿದ್ದವು. ನನ್ನ ತಾತ ಗುಬ್ಬಿ ವೀರಣ್ಣ ಅವರು ದೊಡ್ಡ ನಾಟಕಕಾರರು. ಅವರ ಪ್ರಭಾವ ನನ್ನ ಮೇಲೆ ಸಾಕಷ್ಟಿದೆ. ಹೀಗಾಗಿ ನಾನು ರಂಗಭೂಮಿಯಲ್ಲಿ ಹೆಚ್ಚು ಆಸಕ್ತಿ ತಾಳುವಂತಾಯಿತು. ರಂಗಭೂಮಿಯಲ್ಲಿ ಸಾಕಷ್ಟು ತೊಡಗಿಸಿಕೊಂಡಿದ್ದಲ್ಲದೆ ಸಿನಿಮಾ ಸಂಗೀತ, ಜಾನಪದ ಸಂಗೀತದಲ್ಲೂ ಬಹಳ ಆಸಕ್ತಿ ಇತ್ತು. ಜನಪದ ಸಂಗೀತದ ಜೀವಂತಿಕೆಯನ್ನು ತಂದುಕೊಡಬೇಕೆಂದು ಬಹಳ ಶ್ರಮ ಪಟ್ಟಿದ್ದೇನೆ. ನಾಟಕ, ಸಿನಿಮಾ, ನಾಟಕ ನಿರ್ದೇಶಕ, ಗಾಯನ.. ಹೀಗೆ ಹಲವು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡೆ. ನನ್ನ ಸೇವೆಯನ್ನು ಗುರುತಿಸಿದ ಕೇಂದ್ರ ಸರ್ಕಾರವು, ರಾಜ್ಯಸಭೆಯ



ಮುಂದುವರಿಸಬಾರದು ಎಂಬ ನಿರ್ಬಂಧ ಇಲ್ಲ. ಎಲ್ಲ ರೀತಿಯ ಸ್ವಾತಂತ್ರ್ಯವೂ ನನಗೆ ಸಿಕ್ಕಿದೆ. ಜತೆಗೆ ಗಂಡನ ಪ್ರೋತ್ಸಾಹ, ಬೆಂಬಲವೂ ಸದಾ ಇದೆ. ಪರಸ್ಪರ ಗೌರವ ಇದ್ದಾಗ ಸ್ವಾತಂತ್ರ್ಯ ಇಲ್ಲ ಎಂಬ ಪ್ರಶ್ನೆಯೇ ಬರುವುದಿಲ್ಲ. ಭಿನ್ನಾಭಿಪ್ರಾಯನೂ ಬರಲ್ಲ.

ಒಂದೇ ತಂದೆ ತಾಯಿಗೆ ನಾಲ್ಕು ಜನ ಮಕ್ಕಳು ಇದ್ರೆ ಪ್ರತಿಯೊಬ್ಬರ ಸ್ವಭಾವವೂ ಬೇರೆ ಬೇರೆ ತರ ಇರುತ್ತೆ. ಆದರೆ ಹೆತ್ತವರು ನಮಗೆ ಕೊಟ್ಟ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳಬಾರದು. ನಮ್ಮ ಜೀವನದ ಆಯ್ಕೆ, ವೃತ್ತಿಯ ಆಯ್ಕೆ ನಮ್ಮದಾಗಬೇಕು.

ಚಿಕ್ಕಂದಿನಿಂದಲೂ ನನಗೆ ಎಲ್ಲಿಯೂ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಲೇ ಇಲ್ಲ. ವೇದಿಕೆ ಮೇಲೆ ಹಾಡಿದಾಗ ಬೆನ್ನು ತಟ್ಟಿ ಪ್ರೋತ್ಸಾಹ ಕೊಟ್ಟವರೇ ಹೆಚ್ಚು. ಸಂಗೀತವನ್ನು ಶಿಸ್ತಿನಿಂದ ಕಲಿತೆ, ವೇದಿಕೆ ಮೇಲೆ ಹಾಡುತ್ತಾ ಬಂದೆ, ವೇದಿಕೆಗೆ ಹೋದಾಗ, ಕಛೇರಿ ನಿಮಿತ್ತ ಬೇರೆ ಊರಿಗೆ ಹೋಗಬೇಕಾದಾಗ ಎಷ್ಟು ಜನ ಪುರುಷ ಪಕ್ಕವಾದ್ಯ ಕಲಾವಿದರ ಜತೆಗೆ ಹಾಡಬೇಕಾಗುತ್ತೆ. ಆಗೆಲ್ಲ ನಾವೆಲ್ಲ ಒಂದೇ ಎಂಬ ಭಾವನೆಯೇ ಇರುತ್ತದೆ. ಮಹಿಳಾ ಸ್ವಾತಂತ್ರ್ಯಕ್ಕೆ ಎಲ್ಲೂ ಅಡ್ಡಿಯಾಗಲೇ ಇಲ್ಲ.

ಇಂದು ಹೆಣ್ಣು ಹಿಂದೆ ಇದ್ದ ಹಾಗೆ ನಾಲ್ಕುಗೋಡೆಗಳ ಮಧ್ಯೆ ಬಂಧಿಯಾಗಿಲ್ಲ. ಮನೆಯಲ್ಲೂ ದುಡಿದು, ಹೊರಗೆಯೂ ಕೆಲಸ ಮಾಡಿ ಸಂಪಾದಿಸಿ ಬರುವ ಮಹಿಳೆಯರು ಅದೆಷ್ಟು ಮಂದಿ ಇಲ್ಲ? ನಮ್ಮ ಮನೆಯಲ್ಲಿಯೂ ಅಷ್ಟೆ. ಇದುವರೆಗೂ ನನ್ನ ಗಂಡ ಖರ್ಚಿನ ವಿವರ ಕೇಳಿಲ್ಲ; ಪೈಸೆ ಪೈಸೆ ಲೆಕ್ಕ ಹಾಕಿಯೇ ಇಲ್ಲ. ಅಷ್ಟು ಆರ್ಥಿಕ ಸ್ವಾತಂತ್ರ್ಯ ನಂಗೆ ಸಿಕ್ಕಿದೆ. ಆದರೆ ಎಲ್ಲರ ಮನೆಯಲ್ಲಿ ಎಲ್ಲ ಮಹಿಳೆಯರಿಗೆ ಇದೇ ರೀತಿ ಆರ್ಥಿಕ ಸ್ವಾತಂತ್ರ್ಯ ಸಿಕ್ಕಿದೆ ಎಂದು ಹೇಳಲಿಕ್ಕಾಗಲ್ಲ.

ಇತ್ತೀಚಿನ ದಿನಗಳಲ್ಲಿ ದೌರ್ಜನ್ಯ ಪ್ರಕರಣಗಳು ಹೆಚ್ಚಾಗ್ತಾ ಇದೆ. ಕಾರಣ ಕೆಲವು ಪ್ರಕರಣಗಳಲ್ಲಿ ಪುರುಷರ ಮೃಗೀಯ ವರ್ತನೆ. ಮನುಷ್ಯ ತನ್ನ ಸಂಸ್ಕಾರ, ವಿವೇಚನೆ ಮರೆತು ವರ್ತಿಸಿದಾಗ ಇಂಥ ದೌರ್ಜನ್ಯಗಳಾಗುತ್ತವೆ. ವ್ಯಕ್ತಿಯಲ್ಲಿ ‘ನಾನು..., ನನ್ನದು..’ ಎಂಬ ಪ್ರವೃತ್ತಿ ಹೆಚ್ಚಾದಾಗ ಸ್ವಾತಂತ್ರ್ಯ ಎನ್ನುವುದು ಸ್ವೇಚ್ಛೆಯಾಗುತ್ತೆ. ಯಾವುದೋ ಒಂದು ಘಟ್ಟದಲ್ಲಿ ಬದುಕಲು ಮಾರ್ಗ ಇದೆ, ವಿವೇಕದಲ್ಲಿ ಜೀವನ ನಡೆಸಬೇಕು. ಸಂಗೀತ ಪಿತಾಮಹ ಪುರಂದರ ದಾಸರು ಹೇಳಿದ ಹಾಗೆ ‘ಇಷ್ಟು ದೊರಕಿದರೆ ಮತ್ತಷ್ಟು ಬೇಕೆಂಬಾಸೆ.. ಅಷ್ಟು ದೊರಕಿದರೆ ಮತ್ತಿಷ್ಟರಾಸೆ.. ಕಷ್ಟ ಬೇಡೆಂಬಾಸೆ, ಕಡು ಸುಖವ ಕಾಂಬಾಸೆ...’ ಎನ್ನುವ ಹಾಗೆ ಮನುಷ್ಯನ ಆಸೆ ಆಕಾಂಕ್ಷೆಗಳು ಹೆಚ್ಚಾಗ್ತಾ ಇದೆ. ಇವೆಲ್ಲವೂ ಕೆಲವೊಮ್ಮೆ ಸಮಾಜದ ಆದರ್ಶಗಳನ್ನು ಮರೆಯುವಂತೆ ಮಾಡಬಹುದು. ಆಗ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ.

ಹಾಗೆ ನೋಡಿದರೆ ಇಂದು ಸಮಾಜದಲ್ಲಿ ಗಂಡಸರಿಗಿಂತ ಹೆಚ್ಚಿನ ಶ್ರಮ ತೆಗೆದುಕೊಳ್ಳುವವಳೇ ಹೆಣ್ಣು. ಮನೆಯಲ್ಲೂ, ಹೊರಗೂ ಕೆಲಸ ಮಾಡಿ ಮನೆಯ ಸಮಸ್ತ ಜವಾಬ್ದಾರಿ ನಿರ್ವಹಿಸಿ ಬಹುಪಾತ್ರಗಳ ನಿರ್ವಹಣೆ ಹೆಣ್ಣಿನದೇ ಆಗಿರುತ್ತದೆ.